ಅನುಭವವಾಗದಂತೆ ಚಿಕಿತ್ಸೆ ಮಾಡುವ ವ್ಯವಸ್ಥೆ ಇದೀಗ ದಂತವೈದ್ಯಶಾಸ್ತ್ರದಲ್ಲಿದೆ. ಅದುವೇ ಕಾನ್ಷಿಯಸ್ ಸೆಡೇಷನ್.

ಕಾನ್ಷಿಯಸ್ ಸೆಡೇಷನ್ ಎಂಬುದು ಸರಳ ಮತ್ತು ವಿಶೇಷ ಬಗೆಯ ಅರಿವಳಿಕೆ. ನೈಟ್ರಸ್ ಆಕ್ಸೈಡ್ ಮತ್ತು ಆಮ್ಲಜನಕವನ್ನು ಪ್ರತ್ಯೇಕವಾಗಿ ಹೊಂದಿರುವ ಎರಡು ಸಿಲಿಂಡರ್‌ಗಳು, ಅದರ ಪ್ರಮಾಣವನ್ನು ಅಳೆಯುವ ಹಾಗೂ ಅಪಾಯ ಮಟ್ಟಕ್ಕೆ (ಶೇ.70) ಹೋಗದಂತೆ ತಡೆಯುವ ಸುರಕ್ಷಾ ಕವಾಟದ ವ್ಯವಸ್ಥೆ, ಆ ಮಿಶ್ರಣವನ್ನು ಮಗುವಿನ ದೇಹಕ್ಕೆ ತಲುಪಿಸಲು ಟ್ಯೂಬ್ ಮತ್ತು ಮಾಸ್ಕ್ ಈ ಪರಿಕರದ ಮುಖ್ಯ ಭಾಗಗಳು. ಚಿಕಿತ್ಸೆ ನಡೆಯುವ ಸಂಪೂರ್ಣ ಅವಧಿಯಲ್ಲಿ ಮಾಸ್ಕ್ ಮೂಲಕ ಎರಡು ಅನಿಲಗಳ ಮಿಶ್ರಣವನ್ನು ಮಗುವಿಗೆ ಕೊಡಲಾಗುತ್ತದೆ. ಪರಿಣಾಮ, ಮಕ್ಕಳು ಎಚ್ಚರಿಕೆಯಲ್ಲಿಯೇ ಇದ್ದು ತಜ್ಞರ ಎಲ್ಲ ಆದೇಶಗಳನ್ನು ಪಾಲಿಸುತ್ತಿರುತ್ತಾರೆ. ಆದರೆ ಅವರ ಮೊದಲಿನ ಆತಂಕ ಮರೆಯಾಗಿ, ನೋವಿನ ಅನುಭವವೂ ಕಡಿಮೆಯಾಗುತ್ತದೆ.

ಮಕ್ಕಳ ದಂತ ಚಿಕಿತ್ಸೆಯಲ್ಲಿ ಇದೊಂದು ವರದಾನವೆಂದೇ ಹೇಳಬಹುದು. ತಜ್ಞರು ತಮ್ಮ ಚಿಕಿತ್ಸೆಯನ್ನು ಯಾವುದೇ ಅಡ್ಡಿ ಆತಂಕವಿಲ್ಲದೆ ಮಾಡಿ ಮುಗಿಸಬಹುದು. ಮಕ್ಕಳ ದಂತ ತಜ್ಞರೇ ಅರಿವಳಿಕೆ ಕೊಡಬಲ್ಲರು! ಈ ವಿಧಾನವನ್ನು ಬಳಸಲು ಅರಿವಳಿಕೆ ತಜ್ಞರ ಅಗತ್ಯತೆ ಇರುವುದಿಲ್ಲ. ತಮ್ಮ ಸ್ನಾತಕೋತ್ತರ ಅಧ್ಯಯನದ ಅವಧಿಯಲ್ಲಿ ಈ ಕುರಿತಾದ ತರಬೇತಿಯನ್ನು ಎಲ್ಲ ಮಕ್ಕಳ ದಂತ ತಜ್ಞರು ಪಡೆದಿರುತ್ತಾರೆ. ಹಾಗಾಗಿ ಅವರೇ ಇದನ್ನು ನಿರ್ವಹಿಸಬಹುದು. ಈ ಅರಿವಳಿಕೆಯು ಮಗುವನ್ನು ಸಂಪೂರ್ಣ ಪ್ರಜ್ಞೆ ತಪ್ಪಿಸುವುದಿಲ್ಲ. ಮಗುವಿನ ಆತಂಕವನ್ನು ಕಡಿಮೆ ಮಾಡಿ ನೋವಿನ ಅನುಭವದ ತೀವ್ರತೆಯನ್ನಷ್ಟೇ ಕಡಿಮೆ ಮಾಡಬಲ್ಲದು. ನೈಟ್ರಸ್ ಆಕ್ಸೈಡ್ ಮತ್ತು ಆಮ್ಲಜನಕದ ಮಿಶ್ರಣದ ಪ್ರಮಾಣದ ಬಗ್ಗೆ ವೈದ್ಯರು ಜಾಗರೂಕರಾಗಿರಬೇಕು.

ಸಾಮಾನ್ಯವಾಗಿ ಮಗುವಿನ ವಯಸ್ಸು ಮತ್ತು ಮಾಡಲಿರುವ ಚಿಕಿತ್ಸೆಯನ್ನು ಆಧರಿಸಿ ಪ್ರಮಾಣವನ್ನು ನಿಗದಿಪಡಿಸಲಾಗುತ್ತದೆ. ಚಿಕಿತ್ಸೆಯ ವೇಳೆಯಲ್ಲಿ ವೈದ್ಯರು ಮಗುವನ್ನು ಮಾತನಾಡಿಸುತ್ತಿರುವುದೂ ಅಷ್ಟೇ ಮುಖ್ಯ. ಈ ವಿಧಾನದ ಅರಿವಳಿಕೆಯಲ್ಲಿ ಮಗುವು ಸಂಪೂರ್ಣ ಎಚ್ಚರವಾಗಿರುವುದರಿಂದ ಯಾವುದೇ ಅಹಿತಕರ ಅನುಭವವಾದರೆ ಕೈಸನ್ನೆಯ ಮೂಲಕ ಪ್ರತಿಕ್ರಿಯಿಸುವಂತೆ ತಿಳಿಸಿರಬೇಕು. ವೈದ್ಯರ ಯಾವುದೇ ಆದೇಶಗಳನ್ನು, ಅಂದರೆ ಗಟ್ಟಿಯಾಗಿ ಹಲ್ಲುಗಳನ್ನು ಕಚ್ಚುವುದು ಅಥವಾ ಬಾಯಿಯನ್ನು ದೊಡ್ಡದಾಗಿ ತೆರೆಯುವುದು ಮೊದಲಾದ ಕ್ರಿಯೆಗಳನ್ನು ಮಗು ಮಾಡಲು ಸಮರ್ಥವಾಗಿರುತ್ತದೆ. ಆದರೆ ದಂತ ವೈದ್ಯರು ಮಗುವಿನ ಎಚ್ಚರಿಕೆಯ ಮಟ್ಟವನ್ನು ಸೂಕ್ಷ್ಮವಾಗಿ ಗಮನಿಸುತ್ತಿರಬೇಕು. ನಿದ್ದೆಗೆ ಜಾರುತ್ತಿದೆ ಎನ್ನಿಸಿದರೆ ಕೂಡಲೇ ಅರಿವಳಿಕೆಯ ಔಷಧದ ಪ್ರಮಾಣವನ್ನು ಕಡಿಮೆ ಮಾಡಬೇಕು. ತಕ್ಷಣವೇ ಮಗು ಎಚ್ಚರದ ಸ್ಥಿತಿಗೆ ಬರುತ್ತದೆ. ಈ ಅರಿವಳಿಕೆಯ ಔಷಧವನ್ನು ಬಳಸಿದಾಗಿಯೂ, ಉಳಿದಂತೆ ಚಿಕಿತ್ಸೆಯ ವೇಳೆ ಕೊಡುವ ಸ್ಥಾನಿಕ ಅರಿವಳಿಕೆಯ (ಲೋಕಲ್ ಅನೆಸ್ತೀಷಿಯ) ಚುಚ್ಚುಮದ್ದನ್ನು ಚಿಕಿತ್ಸೆ ಆರಂಭಿಸುವ ಮೊದಲು ಕಡ್ಡಾಯವಾಗಿ ಕೊಡಬೇಕು.

ಚಿಕಿತ್ಸೆ ಮುಗಿದ ಬಳಿಕ ಸಾಮಾನ್ಯವಾಗಿ ಸೂಚಿಸುವ ನೋವು ನಿವಾರಕ ಮಾತ್ರೆಗಳು ಮತ್ತು ಆ್ಯಂಟಿಬಯೊಟಿಕ್ ಔಷಧಗಳನ್ನೂ ಎಂದಿನಂತೆ ಸೂಚಿಸಲೇಬೇಕು. ಈ ವಿಶೇಷ ಅರಿವಳಿಕೆಯ ಬಳಕೆ ಕೇವಲ ಚಿಕಿತ್ಸೆಯ ಸಮಯದಲ್ಲಿ ಆತಂಕ ಹಾಗೂ ನೋವಿನ ಅನುಭವವನ್ನು ಕಡಿಮೆ ಮಾಡುವುದಷ್ಟೆ. ಈ ವಿಧಾನದ ಮತ್ತೊಂದು ಧನಾತ್ಮಕ ಅಂಶವೆಂದರೆ ಔಷಧದ ಬಳಕೆಯನ್ನು ನಿಲ್ಲಿಸಿದ ಕೂಡಲೇ ಮಗು ಯಾವುದೇ ಮಂಪರು ಅಥವಾ ನಿದ್ದೆಯ ಸ್ಥಿತಿಗೆ ಹೋಗದೆ ಮೊದಲಿನ ಎಚ್ಚರಿಕೆಯ ಮಟ್ಟಕ್ಕೆ ಬರುತ್ತದೆ. ಮಗು ಎಂದಿನಂತೆ ದೈನಂದಿನ ಚಟುವಟಿಕೆಗಳಲ್ಲಿ ತೊಡಗಿಕೊಳ್ಳಬಹುದು. ಕೆಲವು ಮಕ್ಕಳಲ್ಲಿ ವಾಕರಿಕೆ ಅಥವಾ ವಾಂತಿ ಕಾಣಿಸಿಕೊಳ್ಳಬಹುದು.

## ಮುನ್ನೆಚ್ಚರಿಕಾ ಕ್ರಮಗಳೇನು?

ಪ್ರೀತಿಯಿಂದ ಮಾತನಾಡಿ, ಮಾಡಲಿರುವ ಚಿಕಿತ್ಸೆಯ ಬಗ್ಗೆ ತಿಳಿಸಿ ಹೇಳಿ ಮಗು ಮತ್ತು ಪೋಷಕರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಬೇಕು.

ಮಕ್ಕಳ ಗಮನವನ್ನು ಬೇರೆಡೆ ಸೆಳೆಯುವಂತಹ ಲಘು ಸಂಗೀತ ಮತ್ತು ವಿವಿಧ ಆಟಿಕೆಗಳು ಕೊಠಡಿಯಲ್ಲಿದ್ದರೆ ಒಳಿತು.

ಚಿಕಿತ್ಸಾಲಯದ ಗೋಡೆಗಳು ಆಕರ್ಷಕ ಬಣ್ಣವನ್ನು ಹೊಂದಿರಲಿ. ಅಲ್ಲಿ ಮಕ್ಕಳನ್ನು ರಂಜಿಸುವ ಚಿತ್ರಗಳಿದ್ದರೂ ಒಳ್ಳೆಯದೇ.

ಈ ಸೌಮ್ಯ ಸ್ವರೂಪದ ಅರಿವಳಿಕೆಯ ಬಗ್ಗೆ ಕಿರಿದಾದ ಮಾಹಿತಿಯನ್ನು ಪೋಷಕರಿಗೆ ಕೊಟ್ಟು ಅನುಮತಿ ಪತ್ರಕ್ಕೆ ಸಹಿ ಹಾಕಿಸಿಕೊಳ್ಳಬೇಕು.

ಮಗು ತಾಯಿಯ ತೊಡೆಯ ಮೇಲೆ ಕುಳಿತೇ ಚಿಕಿತ್ಸೆ ಮಾಡಿಸಿಕೊಳ್ಳುವ ಇಚ್ಛೆ ತೋರಿಸಿದರೆ ಅದಕ್ಕೂ ಆಸ್ಪದ ಮಾಡಿಕೊಡಬೇಕು.

ಚಿಕಿತ್ಸೆಗೂ ನಾಲ್ಕು ತಾಸುಗಳ ಮೊದಲೇ ಆಹಾರ ಸೇವಿಸಿರಬೇಕು.

## ನಿಜಕ್ಕೂ ವರದಾನ!

ಯಾವುದೇ ಆತಂಕವಿಲ್ಲದೆ ಮಕ್ಕಳು ಖುಷಿಯಿಂದ ದಂತಚಿಕಿತ್ಸೆಯನ್ನು ಮಾಡಿಸಿಕೊಳ್ಳುತ್ತಾರೆ. ಭಯದಿಂದ ಚಿಕಿತ್ಸೆಯನ್ನು ಮುಂದೂಡುವುದು ಮತ್ತು ಅದರಿಂದ ಸಮಸ್ಯೆ ಉಲ್ಬಣಿಸುವುದನ್ನು ತಪ್ಪಿಸಬಹುದು.

ಮುಂದಿನ ದಿನಗಳಲ್ಲಿಯೂ ದಂತ ಚಿಕಿತ್ಸೆಯ ಬಗ್ಗೆ ಒಳ್ಳೆಯ ಭಾವನೆ ಮೂಡಿ, ಹಲ್ಲುಗಳ ಸಮಸ್ಯೆಗೆ ಸೂಕ್ತ ವೇಳೆಯಲ್ಲಿ ಚಿಕಿತ್ಸೆ ಪಡೆಯುತ್ತಾರೆ.

ವೈದ್ಯರೂ ಯಾವುದೇ ತೊಡರುಗಳಿಲ್ಲದೆ ಸಮರ್ಪಕ ಚಿಕಿತ್ಸಾ ಪ್ರಕ್ರಿಯೆಯನ್ನು ನಡೆಸುತ್ತಾರೆ.

ದಂತ ಚಿಕಿತ್ಸೆ ಎಂದರೆ ಭಯಪಡುವ ಹದಿಹರೆಯದವರಲ್ಲಿ ಹಾಗೂ ವಯಸ್ಕರಲ್ಲಿಯೂ ಈ ವಿಧಾನವನ್ನು ಬಳಸಬಹುದು. ■

## ಯಾರೆಲ್ಲ ಬಳಸಬಾರದು?

ಮೂರು ವರ್ಷದ ಒಳಗಿನ ಮಕ್ಕಳಲ್ಲಿ, ಉಸಿರಾಟದ ತೊಂದರೆ, ಬಾಯಿಯ ಮೂಲಕ ಉಸಿರಾಟದ ಅಭ್ಯಾಸವಿರುವವರಲ್ಲಿ, ಶ್ವಾಸನಾಳದ ತಡೆಯಿರುವವರಲ್ಲಿ ಈ ವಿಧಾನವನ್ನು ಬಳಸುವುದು ಸಾಧ್ಯವಿಲ್ಲ. ಹೊಟ್ಟೆನೋವು, ಕಿವಿನೋವಿನಿಂದ ಬಳಲುವವರಲ್ಲಿ, ಕಿವಿಯ ಶಸ್ತ್ರಚಿಕಿತ್ಸೆಯಾದವರಲ್ಲಿ, ಮಾನಸಿಕ ಕಾಯಿಲೆಗಳಿಗಾಗಿ ಔಷಧಗಳನ್ನು ಸೇವಿಸುವವರಲ್ಲಿ, ಬ್ಲಿಯೋಮೈಸಿನ್ ಔಷಧ (ಕೆಲವು ಬಗೆಯ ಕ್ಯಾನ್ಸರ್‌ಗಾಗಿ ಕೊಡುವ ಔಷಧ) ಸೇವಿಸುವವರಲ್ಲಿ, ಆಟೊ ಇಮ್ಯೂನ್ ಕಾಯಿಲೆಗಳಿಂದ ಬಳಲುವವರಲ್ಲಿ, ವಿಟಮಿನ್ ಬಿ ಕೊರತೆಯಿಂದ ಬಳಲುವ ಮಕ್ಕಳಲ್ಲಿ, ಅಂಗವಿಕಲ ಮಕ್ಕಳಲ್ಲಿ, ಮೇಲ್ದವಡೆಯ ಶಸ್ತ್ರಚಿಕಿತ್ಸೆಗೆ ಒಳಗಾದ ಮಕ್ಕಳಲ್ಲಿಯೂ ಈ ವಿಧಾನವನ್ನು ಬಳಸಲು ಕಷ್ಟವಾಗಬಹುದು.

